# National
# Kannada
# 11.02.2026 7.35 pm

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ಪ್ರಧಾನಮಂತ್ರಿ ನರೇಂದ್ರ ಮೋದಿ ಅಸ್ಸಾಂಗೆ ೧೪ ರಂದು ಭೇಟಿ; ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ

೨. ದೇಶಾದ್ಯಂತ ೭೫ ಸಾವಿರ ಹೊಸ ವಿವಿಧೋದ್ದೇಶಿತ ಡೈರಿ ಸಹಕಾರ ಸೊಸೈಟಿ ಸ್ಥಾಪನೆ ಉದ್ದೇಶ - ಸಚಿವ ಮುರಳೀಧರ್ ಮೋಹಲ್

೩. ಬಾಂಗ್ಲಾದೇಶದಲ್ಲಿ ನಾಳೆ ರಾಷ್ಟ್ರೀಯ ಸಂಸದೀಯ ಚುನಾವಣೆ; ಬೆಳಗ್ಗೆ ೭.೩೦ ರಿಂದ ಸಂಜೆ ೪.೩೦ ರವರೆಗೆ ಮತದಾನ

೪. ದೇಶದ ವಾಯುಪಡೆ ಸಾಮರ್ಥ್ಯ ಅನಾವರಣಗೊಳಿಸುವ ಅಭ್ಯಾಸ್ ವಾಯುಶಕ್ತಿ ಇದೇ ೨೭ ರಂದು ಪೊಖ್ರಾನ್‌ನಲ್ಲಿ

೫. ಐಸಿಸಿ ಟಿ-೨೦ ವಿಶ್ವಕಪ್; ಇಂದಿನ ಮೊದಲ ಎರಡು ಪಂದ್ಯಗಳಲ್ಲಿ ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ತಂಡಗಳಿಗೆ ಜಯ

***************

ಪ್ರಧಾನಮಂತ್ರಿ ನರೇಂದ್ರ ಮೋದಿ ಇದೇ ೧೪ ರಂದು ಅಸ್ಸಾಂಗೆ ಭೇಟಿ ನೀಡಲಿದ್ದು, ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಉದ್ಘಾಟಿಸಲಿದ್ದಾರೆ.

ಪ್ರಧಾನಿ ಅವರು, ದಿಬ್ರುಗಢ ಜಿಲ್ಲೆಯ ಚೌಬಾದಲ್ಲಿ ನಿರ್ಮಿಸಲಾದ ಈಶಾನ್ಯ ವಲಯದ ಮೊಟ್ಟ ಮೊದಲ ಹೆದ್ದಾರಿ ಆಧರಿತ ತುರ್ತು ನಿಲ್ದಾಣದಲ್ಲಿ ಬಂದಿಳಿಯುವುದು ಐತಿಹಾಸಿಕ ಕ್ಷಣವೆನಿಸಲಿದೆ. ಪ್ರಧಾನಿ ಅವರು, ದಿಬ್ರುಗಢ-ಮೊರಾನ್ ಹೆದ್ದಾರಿಯಲ್ಲಿ ನಿರ್ಮಿಸಲಾದ ಈ ನಿಲ್ದಾಣದಿಂದಲೇ ನಿರ್ಗಮಿಸಲಿದ್ದಾರೆ.

ಅಧಿಕೃತ ಮೂಲಗಳ ಪ್ರಕಾರ ೧೪ರ ಬೆಳಗ್ಗೆ ಚೌಬಾ ವಾಯುಪಡೆ ನೆಲೆಗೆ ಆಗಮಿಸಿ, ಅಲ್ಲಿಂದ ನಂತರ ಮೊರಾನ್‌ನಲ್ಲಿ ವಿಶೇಷವಾಗಿ ಅಭಿವೃದ್ಧಿ ಪಡಿಸಲಾದ ಹೈವೆ ಏರ್‌ಸ್ಟ್ರಿಪ್‌ಗೆ ಬಂದಿಳಿಯಲಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಅನೇಕ ಯುದ್ಧ ವಿಮಾನಗಳು ಕೂಡ ಬಂದಿಳಿಯಲಿವೆ. ಗುವಾಹಟಿ ಮತ್ತು ಉತ್ತರ ಗುವಾಹಟಿಗೆ ಸಂಪರ್ಕ ಕಲ್ಪಿಸಲು ಬ್ರಹ್ಮಪುತ್ರ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಕುಮಾರ ಭಾಸ್ಕರ್ ವರ್ಮನ್ ಸೇತುವೆಯನ್ನು ಪ್ರಧಾನಿ ಅವರು ಉದ್ಘಾಟಿಸಲಿದ್ದಾರೆ. ಗುವಾಹಟಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೆಜ್‌ಮೆಂಟ್‌ನ ತಾಂತ್ರಿಕಲಿಕ ಕ್ಯಾಂಪಸ್ ಉದ್ಘಾಟನೆ ಬಳಿಕ ಕೇಂದ್ರ ಪ್ರಾಯೋಜಿತ ನಿಧಿಯಡಿ ೧೦೦ ಎಲೆಕ್ಟ್ರಿಕ್ ಬಸ್‌ಗಳನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರ ಮಾಡಲಿದ್ದಾರೆ. ಅಮಿಂಗ್‌ಗಾನ್‌ನಲ್ಲಿ ಹೈಪರ್‌ಸ್ಕೇಲ್ ಡಾಟಾ ಸೆಂಟರ್‌ಗೆ ಚಾಲನೆ ನೀಡಿದ ಪ್ರಧಾನಿ

ಅವರು, ಬಳಿಕ ಗುವಾಹಟಿಯಲ್ಲಿ ಪಕ್ಷದ ಪದಾಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುವ ಕಾರ್ಯಕ್ರಮವಿದೆ.

***************

ಲೋಕಸಭೆ ೨೦೨೬-೨೭ರ ಕೇಂದ್ರ ಬಜೆಟ್ ಕುರಿತಾದ ಚರ್ಚೆಯನ್ನು ಇಂದು ಮುಂದುವರೆಸಿತು. ಎಲ್‌ಜೆಪಿ-ಆರ್ ಪಕ್ಷದ ಅರುಣ್ ಭಾರ್ತಿ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿ, ೨೦೪೭ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶವಾಗುವ ಗುರಿ ಸಾಧನೆಗೆ ಈ ಬಜೆಟ್ ಅಡಿಗಲ್ಲಾಗಿದೆ, ಬಜೆಟ್ ಎಂಎಸ್‌ಎಂಇ ವಲಯವನ್ನು ಬಲಗೊಳಿಸುತ್ತಿದೆ.

ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾದ ಇಂದ್ರ ಹಂಗ್ ಸುಬ್ಬಾ ಮಾತನಾಡಿ, ಕೈಗಾರಿಕಾ ನೇತೃತ್ವದಲ್ಲಿ ಸಂಶೋಧನೆಗೆ ಅವಕಾಶ ಕಲ್ಪಿಸಿರುವುದು ಸ್ವಾಗತಾರ್ಹ ಕ್ರಮ ಎಂದರು.

ಆಮ್ ಆದ್ಮಿ ಪಕ್ಷದ ಡಾ.ರಾಜ್‌ಕುಮಾರ್ ಛಬ್ಬೇವಾಲ್, ರಾಷ್ಟ್ರೀಯ ಆರೋಗ್ಯ ಮಿಷನ್‌ಗೆ ಕಡಿಮೆ ಹಣ ನೀಡಲಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಬಿಜೆಪಿಯ ಸುಧೀರ್ ಗುಪ್ತಾ ಬಜೆಟ್ ಸ್ವಾಗತಿಸಿ ಮಾತನಾಡಿ, ೨೦೧೩-೧೪ ರಲ್ಲಿ ಯುಪಿಎ ಅಧಿಕಾರದಲ್ಲಿದ್ದಾಗ ೧೬ ಲಕ್ಷ ಕೋಟಿ ರೂಪಾಯಿಗಳಷ್ಟಿದ್ದ ಬಜೆಟ್ ಗಾತ್ರ ೨೦೨೬-೨೭ ರಲ್ಲಿ ಎನ್‌ಡಿಎ ಆಳ್ವಿಕೆಯಲ್ಲಿ ೫೩ ಲಕ್ಷ ಕೋಟಿ ರೂಪಾಯಿ ದಾಟಿದೆ ಎಂದರು.

ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಾತನಾಡಿ, ಬಜೆಟ್ ಸತ್ವಯುತವಾಗಿಲ್ಲ ಎಂದು ಟೀಕಿಸಿದರು. ಬಜೆಟ್, ಕೃತಕಬುದ್ಧಿಮತ್ತೆಯತ್ತ ಕೇಂದ್ರೀಕೃತವಾಗಿದೆ. ಇಂಜಿನಿಯರಿಂಗ್ ಮತ್ತು ಮಾಹಿತಿ ತಂತ್ರಜ್ಞಾನ ವಲಯದ ಉದ್ಯೋಗಗಳಲ್ಲಿ ಕೃತಕಬುದ್ಧಿಮತ್ತೆಯಿಂದಾಗಿ ಬದಲಾವಣೆ ಉಂಟಾಗುವುದೆಂದು ಆತಂಕ ವ್ಯಕ್ತಪಡಿಸಿದರು. ಭೌಗೋಳಿಕ-ರಾಜಕೀಯ ಸಂಘರ್ಷ ತೀವ್ರಗೊಳ್ಳುತ್ತಿರುವ ಬಗ್ಗೆ ಆರ್ಥಿಕ ಸಮೀಕ್ಷೆ ಪ್ರಸ್ತಾಪಿಸಿದ್ದು, ಈ ಬಗ್ಗೆ ಬಜೆಟ್‌ನಲ್ಲಿ ಏನು ಹೇಳಲಾಗಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಭಾರತ-ಅಮೆರಿಕಾ ವ್ಯಾಪಾರ ಒಪ್ಪಂದ ಪ್ರಸ್ತಾಪಿಸಿದ ರಾಹುಲ್ ಗಾಂಧಿ, ಸರ್ಕಾರ ತನ್ನ ನಿಯಂತ್ರಣ ಕಳೆದುಕೊಳ್ಳುತ್ತಿದೆ ಎಂದರು.

***************

ರಾಜ್ಯಸಭೆ ಕೇಂದ್ರ ಬಜೆಟ್ ಕುರಿತ ಚರ್ಚೆಯನ್ನು ಮುಂದುವರೆಸಿತು. ಐಯುಎಂಎಲ್‌ನ ಹ್ಯಾರೀಸ್ ಬಿರಾನ್ ಬಜೆಟ್‌ನಲ್ಲಿ ರೈತರಿಗೆ ಹಾಗೂ ಮೀನುಗಾರರಿಗೆ ಅನುಕೂಲಕರವಾದ ಯೋಜನೆಗಳಿಲ್ಲ ಎಂದು ಟೀಕಿಸಿದರು.

ಬಿಜೆಪಿಯ ಅಶೋಕ್ ಚೌವಣ್ ಬಜೆಟ್‌ನಲ್ಲಿ ಯುವಜನತೆ, ಮಹಿಳೆಯರು, ರೈತರು ಹಾಗೂ ಸಮಾಜದ ದುರ್ಬಲ ವರ್ಗದವರನ್ನು ಬಲಪಡಿಸುವ ಉಪಕ್ರಮಗಳಿಗೆ ಒತ್ತು ನೀಡಲಾಗಿದೆ ಎಂದರು.

ಮಾಜಿ ಪ್ರಧಾನಿ ಜೆಡಿಎಸ್ ನಾಯಕ ಎಚ್.ಡಿ.ದೇವೇಗೌಡ ಮಾತನಾಡಿ, ದೇಶದಲ್ಲಿ ವಿಶ್ವವನ್ನೇ ಮುನ್ನಡೆಸಬಲ್ಲ ಪ್ರತಿಭೆ ಇದೆ. ಬಜೆಟ್‌ನಲ್ಲಿ ಜಾಣ್ಮೆಗೆ ಮಾತ್ರವಲ್ಲ ಇಂದು ಮತ್ತು ನಾಳಿನ ಭದ್ರ ಆರ್ಥಿಕತೆ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ ಎಂದರು.

ಕಾಂಗ್ರೆಸಿನ ರಾಜೀವ್ ಶುಕ್ಲಾ ಬಜೆಟ್ ತೀವ್ರ ಸಾಮಾನ್ಯವಾಗಿದೆ ಎಂದರು.

***************

ಶ್ವೇತಕ್ರಾಂತಿ ೨.೦ ಯೋಜನೆಯಡಿ ದೇಶದಲ್ಲಿ ಹಾಲು ಉತ್ಪಾದನೆಯನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಕೇಂದ್ರ ಸಹಕಾರ ಖಾತೆ ರಾಜ್ಯ ಸಚಿವ ಮುರಳೀಧರ್ ಮೋಹಲ್ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿಂದು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದ ಅವರು, ಪ್ರಸ್ತುತ ಪ್ರತಿ ದಿನ ೬೬೦ ಲಕ್ಷ ಕಿಲೋಗ್ರಾಮ್ ಹಾಲು ಉತ್ಪಾದಿಸಲಾಗಿದ್ದು, ಇದನ್ನು ಒಂದು ಸಾವಿರದ ೭ ಲಕ್ಷ ಕಿಲೋಗ್ರಾಮ್‌ಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಇದರಿಂದ ಉದ್ಯೋಗ ಸೃಷ್ಟಿಯಾಗುವ ಜೊತೆಗೆ ಮಹಿಳಾ ಸಶಕ್ತೀಕರಣಕ್ಕೆ ಒತ್ತು ನೀಡಿದಂತಾಗುತ್ತದೆ ಎಂದರು.

ಮಾರುಕಟ್ಟೆ ಲಭ್ಯತೆ ಆದಾಯ, ಆವಕಾಶ ಹೆಚ್ಚಳ ಹಾಗೂ ಪೌಷ್ಠಿಕಾಂಶ ಲಭ್ಯತೆ ಸುಧಾರಣೆ ಗಮನದಲ್ಲಿಟ್ಟಿಕೊಂಡು ದೇಶಾದ್ಯಂತ ೭೫ ಸಾವಿರ ಹೊಸ ವಿವಿಧೋದ್ದೇಶಿತ ಡೈರಿ ಸಹಕಾರ ಸೊಸೈಟಿಗಳನ್ನು ಸ್ಥಾಪಿಸುವ ಉದ್ದೇಶವಿದೆ. ಹೈನುಗಾರಿಕೆಯಲ್ಲಿ ಮಹಿಳೆಯರನ್ನು ಹೆಚ್ಚು ತೊಡಗಿಸುವ ಮೂಲಕ ಅವರನ್ನು ಸಬಲಗೊಳಿಸಲು ಒತ್ತು ನೀಡಲಾಗುವುದು ಎಂದು ಸಚಿವ ಮುರಳೀಧರ್ ಮೋಹಲ್ ತಿಳಿಸಿದರು.

***************

ಲೋಕಸಭೆಯಲ್ಲಿ ಬಜೆಟ್ ಮೇಲಿನ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರು ಆಧಾರರಹಿತ ಹೇಳಿಕೆ ನೀಡುವ ಮೂಲಕ ಸದನವನ್ನು ತಪ್ಪುದಾರಿಗೆಳೆದಿದ್ದು, ಅವರ ವಿರುದ್ಧ ಸರ್ಕಾರ ಹಕ್ಕುಚ್ಯುತಿ ಸೂಚನೆ ಮಂಡಿಸಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಕಿರೆನ್ ರಿಜಿಜು ಹೇಳಿದ್ದಾರೆ.

ದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಹುಲ್‌ಗಾಂಧಿ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ವಿರುದ್ಧ ಅನುಪಯುಕ್ತ ತಪ್ಪು ಆರೋಪ ಮಾಡಿದ್ದಾರೆ ಎಂದು ಹೇಳಿದರು.

ರಾಹುಲ್‌ಗಾಂಧಿ ಅವರು ಯಾವುದೇ ಸೂಚನೆಯನ್ನು ನೀಡದೇ ಗಂಭೀರವಾದ ಆಪಾದನೆಯನ್ನು ಮಾಡಿದ್ದಾರೆ ಎಂದು ಕಿರೆನ್ ರಿಜಿಜು ಹೇಳಿದ್ದಾರೆ.

***************

ಬಾಂಗ್ಲಾದೇಶದಲ್ಲಿ ನಾಳೆ ರಾಷ್ಟ್ರೀಯ ಸಂಸದೀಯ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಮತದಾನಕ್ಕಾಗಿ ವ್ಯಾಪಕ ವ್ಯವಸ್ಥೆ ಮಾಡಲಾಗಿದ್ದು, ಮತಗಟ್ಟೆ ಅಧಿಕಾರಿಗಳಿಗೆ ಮತಪೆಟ್ಟಿಗೆಗಳನ್ನು ಈಗಾಗಲೇ ವಿತರಿಸಲಾಗಿದೆ. ೨೯೯ ಮತಕ್ಷೇತ್ರಗಳಲ್ಲಿ ಒಟ್ಟು ೪೨ ಸಾವಿರದ ೭೭೯ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಮತದಾನ ಬೆಳಗ್ಗೆ ೭.೩೦ ರಿಂದ ಸಂಜೆ ೪.೩೦ರವರೆಗೆ ಸತತವಾಗಿ ನಡೆಯಲು ವ್ಯವಸ್ಥೆ ಮಾಡಲಾಗಿದೆ.

ಓರ್ವ ಅಭ್ಯರ್ಥಿಯ ನಿಧನದ ಹಿನ್ನೆಲೆಯಲ್ಲಿ ಶೇರ್‌ಪುರ್-೩ ಕ್ಷೇತ್ರದ ಚುನಾವಣೆಯನ್ನು ಮುಂದಕ್ಕೆ ಹಾಕಲಾಗಿದೆ.

೬ ಕೋಟಿ ೨೮ ಲಕ್ಷ ಮಹಿಳೆಯರು ಸೇರಿದಂತೆ ಒಟ್ಟು ೧೨ ಕೋಟಿ ೭೭ ಲಕ್ಷ ಮತದಾರರು ಮತ ಚಲಾಯಿಸುವ ಹಕ್ಕು ಹೊಂದಿದ್ದಾರೆ ಎಂದು ಬಾಂಗ್ಲಾದೇಶದ ಚುನಾವಣಾ ಆಯೋಗ ತಿಳಿಸಿದೆ.

ಕಾನೂನು ಸುವ್ಯವಸ್ಥೆಗಾಗಿ ದೇಶಾದ್ಯಂತ ೯ ಲಕ್ಷ ೫೧ ಸಾವಿರ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ.

ನಿಗದಿತ ಅವಧಿಯೊಳಗೆ ಬಂದೂಕುಗಳನ್ನು ತಂದು ಒಪ್ಪಿಸದ ೨೦ ಸಾವಿರಕ್ಕೂ ಅಧಿಕ ಪರವಾನಿಗೆದಾರರ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕೃತ ಮೂಲಗಳು ಹೇಳಿವೆ. ಈ ಮಧ್ಯೆ, ಮುಖ್ಯಚುನಾವಣಾ ಆಯುಕ್ತ ಎ.ಎಂ.ಎಂ.ನಾಸೀರುದ್ದೀನ್ ಚುನಾವಣೆ ಕುರಿತಂತೆ ಇಂದು ದೇಶವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

***************

ದೇಶದ ವಾಯುಪಡೆಯ ಸಾಮರ್ಥ್ಯಗಳನ್ನು ಅನಾವರಣಗೊಳಿಸುವ ಅಭ್ಯಾಸ್ ವಾಯುಶಕ್ತಿ ರಾಜಸ್ಥಾನದ ಪೊಖ್ರಾನ್‌ನಲ್ಲಿ ಈ ತಿಂಗಳ ೨೭ ರಂದು ನಡೆಯಲಿದೆ.

ವಾಯು ಸಿಬ್ಬಂದಿ ಉಪಮುಖ್ಯಸ್ಥ ಏರ್ ಮಾರ್ಷಲ್ ನಾಗೇಶ್ ಕಪೂರ್ ನವದೆಹಲಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಈ ಸಂದರ್ಭದಲ್ಲಿ ಎರಡು ಹೊಸ ಶಸ್ತ್ರಾಸ್ತ್ರಗಳನ್ನು ವಾಯುಪಡೆಗೆ ಸೇರಿಸಿಕೊಳ್ಳಲಾಗುತ್ತಿದೆ ಎಂದರು.

ಆಪರೇಷನ್ ಸಿಂಧೂರ್ ಕಾರ್ಯಾಚರಣೆಯಿಂದ ಉಗ್ರವಾದವನ್ನು ಯಾವುದೇ ಕಾರಣಕ್ಕೂ ಸಹಿಸಿಕೊಳ್ಳಲಾಗುವುದಿಲ್ಲ ಹಾಗೂ ಭಯೋತ್ಪಾದನೆಯ ಚಟುವಟಿಕೆಗಳಿಗೆ ತಕ್ಕದಾದ ಉತ್ತರ ನೀಡಲಾಗುವುದು ಎಂದು ಸಂದೇಶ ನೀಡಲಾಗಿದೆ ಎಂದು ಅವರು ಹೇಳಿದರು. ಈ ಅಭ್ಯಾಸದಲ್ಲಿ ೧೨೦ಕ್ಕೂ ಹೆಚ್ಚು ರಕ್ಷಣಾ ಸಾಮಗ್ರಿ ಉಪಕರಣಗಳನ್ನು ನಿಯೋಜಿಸಲಾಗುತ್ತಿದೆ ದೇಶಿಕ ಹಾಗೂ ದಕ್ಷ ಶಸ್ತ್ರಾಸ್ತ್ರಗಳನ್ನು ಪ್ರದರ್ಶಿಸಲಾಗುತ್ತಿದೆ ಎಂದು ಅವರು ಹೇಳಿದರು.

ಒಟ್ಟು ೭೭ ಯುದ್ಧವಿಮಾನ, ೪೩ ಹೆಲಿಕಾಪ್ಟರ್, ೮ ಸಾರಿಗೆ ವಿಮಾನಗಳು ಅಭ್ಯಾಸ ವಾಯುಶಕ್ತಿಯಲ್ಲಿ ಪಾಲ್ಗೊಳ್ಳಲಿವೆ. ರಫೈಲ್, ಸುಖೋಯ್, ಮಿರಾಜ್-೨೦೦೦, ಮಿಗ್-೨೯, ಜಾಗ್ವಾರ್ ಹಾಗೂ ಎಲ್‌ಸಿಎ ತೇಜಸ್ ಅಭ್ಯಾಸದಲ್ಲಿ ಪಾಲ್ಗೊಳ್ಳಲಿವೆ.

ಈ ಅಭ್ಯಾಸ ಸೇನಾಪಡೆಯೊಂದಿಗಿನ ಜಂಟಿ ಕಾರ್ಯಾಚರಣೆಯನ್ನು ಕೂಡ ಪ್ರದರ್ಶಿಸಲಿದೆ ಎಂದು ಏರ್ ಮಾರ್ಷಲ್ ನಾಗೇಶ್ ಕಪೂರ್ ಹೇಳಿದರು.

***************

ಐಸಿಸಿ ಟಿ-೨೦ ವಿಶ್ವಕಪ್ ಕ್ರಿಕೆಟ್‌ನ ಮೊದಲ ಎರಡು ಪಂದ್ಯಗಳಲ್ಲಿ ದಕ್ಷಿಣ ಆಫ್ರಿಕಾ ಹಾಗೂ ಆಸ್ಟ್ರೇಲಿಯಾ ಜಯಗಳಿಸಿವೆ.

ಮೂರನೇ ಪಂದ್ಯ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದಿದ್ದು, ಇಂಗ್ಲೆಂಡ್ ಮತ್ತು ವೆಸ್ಟ್ ಇಂಡೀಸ್ ತಂಡಗಳು ಮುಖಾಮುಖಿಯಾಗಿವೆ. ಇಂಗ್ಲೆಂಡ್ ತಂಡ ಟಾಸ್ ಗೆದ್ದು ಫೀಲ್ಡಿಂಗ್ ಆಯ್ದುಕೊಂಡಿದೆ. ಇತ್ತೀಚಿನ ವರದಿ ಬಂದಾಗ ವೆಸ್ಟ್ ಇಂಡೀಸ್, ೫.೫ ಓವರ್‌ಗಳಲ್ಲಿ ೩ ವಿಕೆಟ್ ೫೫ ರನ್‌ಗಳಿಸಿ ಆಡುತ್ತಿದೆ.

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಗ್ರೂಪ್ ಡಿ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಮತ್ತು ಅಫ್ಘಾನಿಸ್ತಾನ ತಂಡಗಳ ನಡುವಿನ ಪಂದ್ಯವು ೨ ರೋಚಕ ಸೂಪರ್ ಓವರ್‌ಗಳಿಗೆ ಸಾಕ್ಷಿಯಾಯಿತು. ಅಂತಿಮವಾಗಿ ದಕ್ಷಿಣ ಆಫ್ರಿಕಾ ತಂಡ ಗೆಲುವು ಸಾಧಿಸಿತು.

ಕೊಲಂಬೊದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ, ಐರ್ಲೆಂಡ್ ಅನ್ನು ೬೭ ರನ್‌ಗಳಿಂದ ಪರಾಭವಗೊಳಿಸಿದೆ.

*******ಮುಕ್ತಾಯ*******